**OS. No 45/2018**
**D.W-5**

**( ದಿನಾಂಕ.12-04-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ ಶ್ರೀ.B.A.D ವಕೀಲರಿಂದ**

ನಾಮದೇವ ಪವಾರರವರು 5 ನೇ ಪ್ರತಿವಾದಿಗೆ ದಾವಾಸ್ತಿ ಕೊಡುವ ಸಲುವಾಗಿ ನನ್ನ ಮುಂದೆ ದಾಖಲೆ ಬರೆದಿರುತ್ತಾನೆ. ಸದರಿ ದಾಖಲೆ ಕನ್ನಡದಲ್ಲಿ ಬರೆದಿರುತ್ತದೆ. ಸದರಿ ದಾಖಲೆಯನ್ನು ಛಾಪಾ ಕಾಗದದ ಮೇಲೆ ಬರೆಯಲಾಗಿರುತ್ತದೆ. ಸದರಿ ದಾಖಲೆಯನ್ನು ಉಪ-ನೋಂದಣಿ ಕಚೇರಿಯಲ್ಲಿ ಬರೆದಿರುತ್ತಾರೆ. ಆ ವೇಳೆಗೆ ನಾನು, ಬಾಬು, ಧನ್ನು ಮತ್ತು ಸುಬಾಸ ಎಲ್ಲರೂ ಇದ್ದೇವು. ಸದರಿ ದಾಖಲೆ 5 ನೇ ಪ್ರತಿವಾದಿ ಹತ್ತಿರ ಹೋಗಿರುತ್ತದೆ. ತದನಂತರದಲ್ಲಿ ಇವತ್ತಿನವರೆಗೂ ಸದರಿ ದಾಖಲೆಯನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಯಾಗಿ ಸುಮಾರು 25-30 ವರ್ಷವಾಗಿರುತ್ತದೆ.

ನಾಮದೇವ ಪವಾರರವರು 5 ನೇ ಪ್ರತಿವಾದಿಗೆ ಕೊಟ್ಟ ಸ್ವತ್ತನ್ನು ಖರೀದಿ ಮಾಡಿದ ಬಗ್ಗೆ ನಾನು ಯಾವುದೇ ದಾಖಲೆ ನೋಡಿಲ್ಲ. ನಾಮದೇವ ಹೆಸರಿನಲ್ಲಿ ಸದರಿ ಸ್ವತ್ತು ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ನಾಮದೇವರವರು ಛಾಪಾ ಕಾಗದದ ಮೇಲೆ ದಾಖಲೆ ಬರೆಸಿಯಿ 5 ನೇ ಪ್ರತಿವಾದಿಗೆ ಕೊಟ್ಟರು ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ನಾನು ಹೇಳುವ ದಾಖಲೆಯನ್ನು ನಾಮದೇವ ಜೀವಂತ ಇರುವರೆಗೂ ಬರೆದು ಕೊಟ್ಟಿಲ್ಲ ಎಂದರೆ ಸರಿಯಲ್ಲ.

**OS. No 45/2018**

**D.W-5**

ಸರ್ವೇ ನಂಬರ 320 ರ 3 ಎಕರೆ 30 ಗುಂಟೆ ಜಮೀನು ಇದು ನಾಮದೇವರವರ ಸ್ವಯಾರ್ಜಿತ ಸ್ವತ್ತು ಎಂದು ಹೇಳುವ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ನಾಮದೇವರವರಿಗೆ ತಾಂಡಾದಲ್ಲಿ ಇರುವ ಒಂದು ನಿವೇಶನ ಅವರು ಕೊಂಡುಕೊಂಡಿದ್ದಾಗಿರುತ್ತದೆ. ಯಾರಿಂದ ತೆಗೆದುಕೊಂಡರು ಎಂದು ಗೊತ್ತಿಲ್ಲ, ಆದರೆ ಬಹಳ ದಿವಸ ಆಗಿರುತ್ತದೆ. ಸದರಿ ನಿವೇಶನವನ್ನು ಕೊಂಡುಕೊಂಡ ಬಗ್ಗೆ ದಾಖಲೆಯನ್ನು ನಾನು ನೋಡಿಲ್ಲ. 1 ನೇ ಪ್ರತಿವಾದಿ ನಾಮದೇವರವರ ಹೆಂಡತಿ ಎಂದರೆ ಸರಿ. 4 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ಮಗಳಾಗಬೇಕು.

1 ಮತ್ತು 4 ನೇ ಪ್ರತಿವಾದಿಗಳು ಜಮೀನು ಕೊಂಡುಕೊಂಡ ಬಗ್ಗೆ ನಾನು ನೋಡಿರುತ್ತೇನೆ. ಸಾಕ್ಷಿ ಮುಂದುವರೆದು 4 ನೇ ಪ್ರತಿವಾದಿ ಸರ್ವೇ ನಂಬರ 320 ನ್ನು ಕೊಂಡುಕೊಂಡು ನಂತರ 1 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ. 4 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ಮೇಲೆ ಹೇಳಿದ ಸರ್ವೇ ನಂಬರನ್ನು ಖರೀದಿ ಕೊಟ್ಟಿರುತ್ತಾಳೆ. ಎಷ್ಟು ಹಣಕ್ಕೆ ಖರೀದಿ ಕೊಟ್ಟಿರುತ್ತಾಳೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಕಾಗದ ನನ್ನ ಸಮಕ್ಷಮ ಆಗಿಲ್ಲ. 1 ಮತ್ತು 4 ನೇ ಪ್ರತಿವಾದಿಗಳು ಇನ್ನು ಜೀವಂತವಿರುತ್ತಾರೆ. ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಬಹುದು ಎಂದರೆ ಸರಿ.

5 ನೇ ಪ್ರತಿವಾದಿ ನನ್ನನ್ನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾಳೆ. ದಾವಾಸ್ತಿಗಳೆಲ್ಲವೂ ವಾದಿ ತಂದೆಯ ಹಿರಿಯರ ಸ್ವತ್ತುಗಳು ಹಾಗೂ ಅವರ ತಂದೆ ತೀರಿಕೊಂಡ ನಂತರ ದಾವಾಸ್ತಿಗಳಲ್ಲಿ ವಾದಿಗೆ

ಸಮಪಾಲು ಇದೆ ಎಂದರೆ ಸರಿಯಲ್ಲ. ನನಗೆ ಕನ್ನಡ ಭಾಷೆ ಮಾತನಾಡಲು ಬರುತ್ತದೆ. ಓದಲಿಕ್ಕೆ ಬರುವುದಿಲ್ಲ. ಅದೇ ರೀತಿ ಇಂಗ್ಲೀಷ ಭಾಷೆ ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. DW-4 ರವರು ನ್ಯಾಯಾಲಯದಲ್ಲಿ ಹಾಜರಿರುತ್ತಾರೆ, ಸಾಕ್ಷಿ ಅವರನ್ನು ನೋಡಿ ಗುರುಸಿರುತ್ತಾರೆ. DW-4 ರವರ ಹೇಳಿಕೆ ಮೇರೆಗೆ ಹಾಗೂ 5 ನೇ ಪ್ರತಿವಾದಿಗೆ ಅನುಕೂಲಮಾಡಲು ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**